‘ಆಕೆಯೇ ಹೆಚ್ಚು ಸುಸ್ತು ಆಗ್ಯಾಳ’ ಅಂದ ಇಮಾಮಸಾಬ. ಗಣೇಶ ಅವರನ್ನ ಆಸ್ಪತ್ರೆಗೆ ಶಿಫ್ಟ್ ಮಾಡಿಸಲು ಅಂಬ್ಯುಲೆನ್ಸಿಗೆ ಫೋನು ಮಾಡಿದ. ಬೇಗ ಸಿಗಲಿಲ್ಲ. ಅವತ್ತು ಅದಕ್ಕೆ ಪುರುಸೊತ್ತಿರಲಿಲ್ಲ. ಜ್ವರದ ಗುಳಿಗೆ, ಸಿ ವಿಟಾಮಿನ್ ಗುಳಿಗೆ ತಂದುಕೊಟ್ಟ. ಸಂಜೆಗೆ ಅವರನ್ನ ವಾಹನದ ಮೂಲಕ ಆಸ್ಪತ್ರೆಗೆ ಸಾಗಿಸಲಾಯಿತು. ಇಬ್ಬರಿಗೂ ರಕ್ತ ತಪಾಸಣೆ ಮಾಡಿದಾಗ ಕೊರೊನಾ ಪಾಸಿಟಿವ್ ಆಗಿದ್ದರು. ಡಾಕ್ಟರಗೆ ಮಾತಾಡಲೂ ಸವುಡು ಇರಲಿಲ್ಲ. ನರ್ಸುಗಳು, ಡಾಕ್ಟರು ಪಾದರಸದ ಹಾಂಗ ಹರಿದಾಡತಿದ್ದರು. ನಿರೀಕ್ಷೆಗೆ ಮೀರಿ ವೆಂಟಿಲೇಟರ್‌ಗಳು ಬೇಕಾಗಿದ್ದರಿಂದ ಅವುಗಳ ಅಭಾವ ಸೃಷ್ಟಿಯಾಯಿತು. ಅಷ್ಟೊತ್ತಿಗೆ ಜಗದೀಶ ಅಲ್ಲಿಗೆ ಮುಖಗವುಸಿನಲ್ಲೇ ಮೂಗೇರಿಸುತ್ತಾ ಬಂದ. ಡಾಕ್ಟರು ಅಸಹಾಯಕ ಆಗಿದ್ದರು.

‘ನನ್ನ ಗೆಳೆಯ ಕೊಲ್ಲಾಪುರದಲ್ಲಿ ಮೆಡಿಕಲ್ ರಿಪ್ರಜೆಂಟೇಟಿವ್ ಅದಾನ. ಅಲ್ಲಿ ಮಹಾರಾಷ್ಟ್ರದಲ್ಲಿ ಸಪ್ಲೈ ಇರಬೇಕು, ಕೇಳ್ತೀನಿ’ ಅಂದು ಫೋನು ಹಚ್ಚಿದ. ‘ಕಂಪನಿಯ ವಾಹನದಲ್ಲಿ ವೆಂಟಿಲೇಟರ್ ಬರ್ತಿವೆ, ಬಂದು ಒಯ್ಯಬಹುದು’ ಅಂತ ಗೆಳೆಯ ಹೇಳಿದಾಗ ಅವ ಬಹಳ ಖುಷಿಪಟ್ಟ. ‘ಮೂಗು ಏರಿಸ್ತೀದಿ, ನೋಡು, ಹೆಂಗ ಮಾಡಿತೀದಿ?’ ಅಂತ ಗಣೇಶ ಅಂದ. ‘ಹಂಗೇನಿಲ್ಲ, ನಾಳೆ ಬೆಳಿಗ್ಗೆ ಕೊಲ್ಲಾಪುರ ಬಸ್ಸಿಗೆ ಲಗೂನ ಹೋಗಿ ಬಂದುಬಿಡ್ತೀನಿ’ ಅಂದ.

ಗಣೇಶ ರಾತ್ರಿ ಮನಿಗೆ ಬಂದು ಬಾಗಲಾ ಬಡಿದಾಗ ಹೆಂಡತಿ ಮುಖಗವುಸಿನಲ್ಲೇ ಬಂದು ಬಾಗಲಾ ತೆಗೆದು ದುರುದುರು ನೋಡಿ ಹೋದಳು. ಸೀದಾ ಪಾವಟಿಗೆ ಹತ್ತಿ ಮಹಡಿ ಕೋಣೆಗೆ ಬಂದು ಬಟ್ಟೆ ಬಿಚ್ಚಿ ಸ್ನಾನಕ್ಕ ಹೋದ. ಅವ್ವ ಬಂದು ದೂರದಲ್ಲಿ ತಾಟು ಇಟ್ಟು ಸನ್ನೆ ಮಾಡಿ ಹೋದಳು. ಮನಿ ಒಂದು ರೀತಿ ಜೈಲು ಅನಿಸಿತು. ಊಟ ಮಾಡಿ ಮಲಗಿದಾಗ ಹೆಂಡತಿ-ಮಕ್ಕಳ ನೆನಪಾಗಿ ಚಡಪಡಿಸಿದ. ಈ ಸನ್ಯಾಸ ಎಂದು ಮುಗಿದೀತೊ, ಬದುಕಿನ ಬಂಡಿ ಯಾವಾಗ ರಸ್ತೆ ಹಿಡಿದೀತೋ ಅಂತ ಕಳವಳಕ್ಕೀಡಾದ. ‘ಪಾಪ! ಇಮಾಮಸಾಬ, ಅವನ ಹೆಂಡತಿ ಲಗೂನ ಆರಾಮ ಆಗಲಿ, ಜಗದೀಶ ಲಾಗಲಚ್ ವೆಂಟಿಲೇಟರ್ ತರಲಿ’ ಅಂತ ಹಾರೈಸ್ತಾ ಮಲಗಿದ.

ಬೆಳಿಗ್ಗೆ ಆರು ಗಂಟೆಯ ಬಸ್ಸು ಹಿಡಿಯಲು ಜಗದೀಶ ನಾಕು ಗಂಟೆಗೇ ಎದ್ದು ತಯಾರಾಗಿ ಸ್ಟ್ಯಾಂಡ್‌ಗೆ ಬಂದಿದ್ದ. ಬಸ್ಸಿನಲ್ಲಿ ಒಂದು ಸೀಟಿಗೆ ಒಬ್ಬರಂತೆ ಕೂಡುವ ವ್ಯವಸ್ಥೆ ಇತ್ತು. ಎಲ್ಲಾರೂ ತಪ್ಪದೇ ಮಾಸ್ಕ್ ಹಾಕ್ಕೊಂಡಿದ್ದರು.

ಹಿಂದಿನ ರಾತ್ರಿ ಅವನಿಗೆ ಕನಸು ಬಿದ್ದಿತ್ತು. ಏದುಸಿರು ಬಿಡುತ್ತಾ ಮಲಗಿರುವ ಕೊರೊನಾ ರೋಗಿಗಳಿಗೆ ವೆಂಟಿಲೇಟರ್‌ಗಳು ವರದಾನವಾಗಿದ್ದವು. ಅಂಥ ವೆಂಟಿಲೇಟರ್‌ಗಳನ್ನು ತಂದುಕೊಟ್ಟು ಹಲವಾರು ಜೀವಗಳನ್ನು ಉಳಿಸಿದ ಪುಣ್ಯ ಅವನದಾಗಿತ್ತು. ಲಕ್ಷ್ಮಣ ಯುದ್ಧದಲ್ಲಿ ತೀವ್ರ ಗಾಯಗೊಂಡು ಪ್ರಜ್ಞಾಹೀನನಾಗಿ ಮಲಗಿರುವಾಗ ಹನುಮಂತ ಸಂಜೀವಿನಿ ಬೆಟ್ಟವನ್ನೇ ತಂದುಕೊಟ್ಟು ಅವನ ಜೀವ ಉಳಿಸಿದನಲ್ಲ! ಇಲ್ಲಿ ಒಬ್ಬ ಲಕ್ಷ್ಮಣನಲ್ಲ, ಹಲವಾರು ಲಕ್ಷ್ಮಣರು. ಅಂಥ ಸಾರ್ಥಕ ಕೆಲಸ ಮಾಡಿದ್ದ. ಜಗದೀಶ ಅಲಾರಂ ಇಟ್ಟು ಮಲಗಿದ್ದು ನಾಕು ಮೂವತ್ತಕ್ಕೆ. ಆದರೆ ಕನಸು ಬಿದ್ದು ಎಚ್ಚರಾದದ್ದು ನಾಕು ಗಂಟೆಗೇ. ಇನ್ನು ಮಲಗೋದು ಬೇಡ ಅಂತ ಎದ್ದೇಬಿಟ್ಟ. ಬೆಳಗಿನ ಕಾರ್ಯಕ್ರಮ ಆರಂಭಿಸಿದ. ಅವ್ವ ಅವನ ಭಾಂಡೆಗಳ ಸಪ್ಪಳಕ್ಕ ಎದ್ದು ಬಂದಳು.

‘ಯಾಕೋ ಎಷ್ಟು ಲಗೂನ ಎದ್ದೀಯಲ್ಲ?’

‘ಕೊಲ್ಲಾಪುರಕ್ಕ ಹೊಂಟೀನಿ, ಕಂಪನಿ ಕೆಲಸ. ಇವತ್ತು ಆಗದಿದ್ರ ನಾಳೆ ಬಂದುಬಿಡತೀನಿ.’ ಇಬ್ಬರೂ ಪಿಸುದನಿಯಲ್ಲಿ ಮಾತಾಡಿದರು. ಅವನ ಅಪ್ಪ ಕಾಯಿಲೆಯಿಂದ ಈಗಷ್ಟೇ ಗುಣವಾಗಿದ್ದ. ಅಟ್ಟದ ಕೋಣೆಯಲ್ಲಿ ವಿಶ್ರಾಂತಿ ಪಡೀತಿದ್ದ.

‘ಈ ಕೊರೊನಾ ಕಾಲದಾಗ ಊರೂರು ತಿರುಗೋದು... ಮೂಗು ಬ್ಯಾರೆ ಏರಿಸ್ತೀದಿ... ಬಿಡಾಕ ಬರದಿದ್ರ ಬಿಟ್ಟು ಬಿಡು.’

‘ನನ್ನ ಕೆಲಸಾನೇ ಅಂತಹದ್ದು. ಹೋಗಬೇಕಾಗೇತಿ.’

ಅವ್ವ ಚಹಾ ಮಾಡಿಕೊಟ್ಟು ‘ಹುಷಾರು’ ಅಂತ ಹೇಳ್ತಾ ಗೇಟು ದಾಟಿ ಹೋಗೋವರೆಗೂ ಕೈ ಮಾಡ್ತಾ ನಿಂತಳು. ನಂತರ ಒಳಬಂದು ದೇವರ ಮುಂದ ದೀಪ ಹಚ್ಚಿ ನಂಜುಂಡೇಶ್ವರ ಫೋಟೊಗೆ ಕೈ ಮುಗದು ‘ಕಾಪಾಡಪ್ಪಾ’ ಅಂದಳು.

ಹೊರಗ ಥಂಡಿ ಗಾಳಿ ಬೀಸತಿತ್ತು. ತುಂತುರು ಹನಿ ಉದರತಿದ್ದವು. ಅವನ ಘನ ಉದ್ದೇಶದ ಮುಂದೆ ಇವ್ಯಾವೂ ಗಣನೆಗೆ ಬರಲಿಲ್ಲ.

ಕೊಲ್ಲಾಪುರದ ಬಸ್‌ಸ್ಟ್ಯಾಂಡ್‌ದಲ್ಲಿ ಗೆಳೆಯ ಕಾಯ್ತಾ